**ಕರ್ನಾಟಕ ಲೋಕಾಯುಕ್ತ**

ಸಂಖ್ಯೆ: ಕಂಪ್ಲೆಂಟ್/ಉಪಲೋಕ್/ಬಿಡಿ/201/2014/ಸನಿಕಾಸ-2

ಬಹುಮಹಡಿಗಳ ಕಟ್ಟಡ,
ಡಾ॥ಬಿ.ಆರ್.ಅಂಬೇಡ್ಕರ್ ವೀಧಿ,
ಬೆಂಗಳೂರು, ದಿನಾಂಕ: 27.1.2017

**ಕರ್ನಾಟಕ ಲೋಕಾಯುಕ್ತ ಕಾಯಿದೆ 1984ರ ಕಲಂ 12(3)ರ ಅನ್ವಯ ವರದಿ**

**ವಿಷಯ:** ಶ್ರೀ ಚಂದ್ರು, ಅಂದಿನ ತಹಶೀಲ್ದಾರ್, ದೊಡ್ಡಬಳ್ಳಾಪುರ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ, ಇವರ ಕರ್ತವ್ಯಲೋಪದ ಕುರಿತು.

*******

ಶ್ರೀ ಮಂಜುನಾಥ್, ತಂದೆ ಲೇಟ್ ಯಲ್ಲಪ್ಪ, ಬಿಸುವನಹಳ್ಳಿ ಗ್ರಾಮ, ದೊಡ್ಡಬಳ್ಳಾಪುರ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ (ಇನ್ನು ಮುಂದೆ "ದೂರುದಾರರು" ಎಂದು ಕರೆಯಲ್ಪಡುತ್ತಾರೆ) ತಮ್ಮ ದೂರಿನಲ್ಲಿ ಶ್ರೀ.ಸಂಪತ್ ಕುಮಾರ್, ನಿವೃತ್ತ ತಹಶೀಲ್ದಾರ್, ಮತ್ತು (2) ಶ್ರೀ ಚಂದ್ರು, ತಹಶೀಲ್ದಾರ್, ದೊಡ್ಡಬಳ್ಳಾಪುರ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ (ಇನ್ನು ಮುಂದೆ " 1 ಮತ್ತು 2ನೇ ಎದುರುದಾರರು ಎಂದು ಕರೆಯಲ್ಪಡುತ್ತಾರೆ) ರವರ ವಿರುದ್ಧ ಅವ್ಯವಹಾರದ ಬಗ್ಗೆ ನೀಡಿದ ದೂರನ್ನು, ಕರ್ನಾಟಕ ಲೋಕಾಯುಕ್ತ ಕಾಯಿದೆಯ ಕಲಂ 9ರ ಅಡಿಯಲ್ಲಿ ತನಿಖೆಗೆ ತೆಗೆದುಕೊಳ್ಳಲಾಗಿದೆ.

**2. ದೂರಿನ ಸಂಕ್ಷಿಪ್ತ ವಿವರಣೆ:-**

ದೂರುದಾರರು ತಮ್ಮ ದೂರಿನಲ್ಲಿ ದೊಡ್ಡಬಳ್ಳಾಪುರ ತಾಲ್ಲೂಕು ಬಿಸವನಹಳ್ಳಿ ಗ್ರಾಮದ ಸರ್ವೆ ನಂ.22, 23, 24, ಒಟ್ಟು ಕ್ಷೇತ್ರ 5.21 ಎಕರೆ ಜಮೀನು ಸುಮಾರು ವರ್ಷಗಳಿಂದ ತಹಶೀಲ್ದಾರ್, ದೊಡ್ಡಬಳ್ಳಾಪುರ, ಅವರ ಹೆಸರಿನಲ್ಲಿ ಪಹಣಿಯಲ್ಲಿ ಬರುತ್ತಿದ್ದು, ಆದರೆ 2012-13ರಲ್ಲಿ ಪಕ್ಕದಲ್ಲಿರುವ ಶ್ರೀಮಂತರಿಗೆ ಮತ್ತು ಯಲಹಂಕದ ಶ್ರೀಮಂತ ಡೆವಲಪರ್ ಮುರಳೀಧರ್ ಎಂಬುವವರಿಗೆ ಈ ಜಮೀನುಗಳ ದಾಖಲೆ ಮಾಡಿರುತ್ತಾರೆ. ಇದನ್ನು ತಿಳಿದು ಗ್ರಾಮಸ್ಥರು 22.3.2013ರಂದು ಸಕಾಲದಲ್ಲಿ ಅರ್ಜಿ ಸಲ್ಲಿಸಿ ದಾಖಲಾತಿಗಳನ್ನು ಕೇಳಿದ್ದು, ಆದರೆ ಎದುರುದಾರರು ಸೂಕ್ತ ದಾಖಲಾತಿಗಳನ್ನು ನೀಡಿರುವುದಿಲ್ಲ. 22.1.2003ರಂದು ಆಶ್ರಯ ಯೋಜನೆಯಡಿ ಹಂಚಿಕೆಯಾಗಿರುತ್ತದೆ ಎಂದು ಎದುರುದಾರರು ಹಿಂಬರಹ ನೀಡಿರುತ್ತಾರೆ. ಆದ್ದರಿಂದ ಇದನ್ನು ಪರಿಶೀಲಿಸಿ ಎದುರುದಾರರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ದೂರು ಸಲ್ಲಿಸಿದ್ದಾರೆ.

3. 1ನೇ ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ ತಾನು ದಿ.29.2.2012ರಂದು ಸೇವಾನಿವೃತ್ತನಾಗಿದ್ದು, ತನ್ನ ಅವಧಿಯಲ್ಲಿ ಈ ಜಮೀನುಗಳ ಮೇಲೆ ಯಾವುದೇ ಕ್ರಮಜರುಗಿಸಿರುವುದಿಲ್ಲ. ಆದ್ದರಿಂದ ತನ್ನನ್ನು ಪ್ರಕರಣದಿಂದ ಕೈಬಿಡಬೇಕೆಂದು ಕೋರಿದ್ದಾರೆ.

4. 2ನೇ ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ ಬಿಸವನಹಳ್ಳಿ ಗ್ರಾಮದ ಸ.22,23 ಮತ್ತು 24ರಲ್ಲಿ ಪಹಣಿ ಮತ್ತು ಹಕ್ಕು ಬದಲಾವಣೆಯಲ್ಲಿ ತಹಶೀಲ್ದಾರ್, ದೊಡ್ಡಬಳ್ಳಾಪುರ ಎಂದು ನಮೂದಾಗಿರುತ್ತದೆ. ಜಮೀನಿನ ಮೂಲ ಖಾತೆದಾರರಾದ ಲಕ್ಷ್ಮಣಶಾಸ್ತ್ರಿ ಎಂಬುವವರ ಹೆಸರಿಗೆ ಪುನರ್ ಸ್ಥಾಪಿಸಬೇಕೆಂದು ಕೋರಿ ಅವರ ಜಿ.ಪಿ.ಎ. ಹೋಲ್ಡರ್ ಶ್ರೀ ರಂಗನಾಥಶಾಸ್ತ್ರಿ ಎಂಬುವವರು ದಿ.3.2.2012ರಂದು ಲಿಖಿತ ಮನವಿ ಸಲ್ಲಿಸಿರುತ್ತಾರೆ. ಈ ಬಗ್ಗೆ ದಾಖಲೆಗಳನ್ನು ಪರಿಶೀಲಿಸಲಾಗಿ, ಈ ಜಮೀನು ಮೂಲತ: ಶಾನುಭೋಗ ಇನಾಂತಿ ಜಮೀನಾಗಿದ್ದು, ಅದಲುಬದಲು ಮೂಲಕ ದಿ.10.6.1954ರಂದು ಲಕ್ಷ್ಮಣಶಾಸ್ತ್ರಿ ಅವರಿಗೆ ನೀಡಿರುತ್ತಾರೆಂದು 1954ರಲ್ಲಿ ಶ್ರೀ ನಾಗೇಶಪ್ಪ ಗೇಣಿದಾರರೆಂದು ಹಾಗೂ ಸುಬ್ರಮಣ್ಯ ಗುತ್ತಿಗೆ ಪಡೆದಿರುವುದಾಗಿ ತೊಂದರೆ ಮಾಡಿದ್ದರಿಂದ ಸಿ.ಆರ್.ಪಿ.ಸಿ.140ರಡಿ ಇವರ ಮೇಲೆ ಕ್ರಮ ತೆಗೆದುಕೊಳ್ಳಲು ಪ್ರಕರಣ ದಾಖಲಿಸಿದ್ದು ಇರುತ್ತದೆ. ಸಿವಿಲ್ ನ್ಯಾಯಾಲಯದಲ್ಲಿ ಅಂತಿಮವಾಗಿ ಹಕ್ಕು ಸಾಬೀತುಪಡಿಸಿಕೊಳ್ಳುವವರೆಗೆ ಮತ್ತು ಆದೇಶ ಆಗುವವರೆಗೆ ಜಮೀನಿನ ಉಸ್ತುವಾರಿ ನೋಡಿಕೊಳ್ಳುವಂತೆ ಅಧಿಕೃತ ರಿಸೀವರನ್ನಾಗಿ ನೇಮಕ ಮಾಡಿ ಆದೇಶಿಸಿರುತ್ತಾರೆ.

5. ಆನಂತರ ದೊಡ್ಡಬಳ್ಳಾಪುರ ನ್ಯಾಯಾಲಯದಲ್ಲಿ ಒ.ಎಸ್.158/98 ಅಂತ ದಾವೆ ದಾಖಲಾಗಿದ್ದು, ಅದರಲ್ಲಿ ದಿ.7.12.2007ರಂದು ರಾಜಿ ಡಿಕ್ರಿಯಾಗಿರುತ್ತದೆ. ಆ ಪ್ರಕಾರ .ರಿಸೀವರ್ ಎಂಬುದನ್ನು ಬದಲಾಯಿಸಿ ಎಂ.ಎಸ್.ಲಕ್ಷ್ಮಣಶಾಸ್ತ್ರಿ ಹಾಗೂ ವಾರಸುದಾರರಿಗೆ ಆರ್.ಆರ್.ಟಿ.ಸಿ.ಆರ್. 118/2012-13 ರಂತೆ ಖಾತೆ ಆದೇಶ ತಾನು ಮಾಡಿದ್ದು ಇರುತ್ತದೆ. ನಮೂನೆ 21ನ್ನು ಪ್ರಚುರಪಡಿಸಿದಾಗ ಯಾವುದೇ ತಕರಾರು ಬರದ ಕಾರಣ ಖಾತೆ ಬದಲಾವಣೆಯಾಗಿದ್ದು, ಕಾರಣ ಸದರಿ ಪ್ರಕರಣವನ್ನು ಮುಕ್ತಾಯಗೊಳಿಸಬೇಕೆಂದು ಕೇಳಿಕೊಂಡಿದ್ದಾರೆ.

6. ದೂರುದಾರರು ತಮ್ಮ ಪ್ರತ್ಯುತ್ತರದಲ್ಲಿ ದೂರಿನಲ್ಲಿನ ಅಂಶಗಳನ್ನು ಪುನರುಚ್ಚರಿಸಿದ್ದಾರೆ.

7. ದೂರುದಾರರು ಹಾಜರುಪಡಿಸಿದ ದೂರು ಮತ್ತು ದಾಖಲಾತಿಗಳು, ಆಕ್ಷೇಪಣೆ ಮತ್ತು ದಾಖಲಾತಿಗಳು, ಮತ್ತು ಪ್ರತ್ಯುತ್ತರ ಮತ್ತು ದಾಖಲಾತಿಗಳನ್ನು ಪರಿಶೀಲಿಸಿದಾಗ, ಸರ್ವೆ ನಂ.22,ವಿಸ್ತೀರ್ಣ 26 ಗುಂಟೆ, ಸರ್ವೆ ನಂ. 23 ವಿಸ್ತೀರ್ಣ 1.30 ಎಕರೆ, 24, ವಿಸ್ತೀರ್ಣ 3 ಎಕರೆ, ಇದ್ದು, 2011-12ರ ವರೆಗೆ ಕಾಲಂ.9 ಮತ್ತು 12ರಲ್ಲಿ ತಹಶೀಲ್ದಾರ್, ದೊಡ್ಡಬಳ್ಳಾಪುರ ಅಂತ ನಮೂದಾದ ಪಹಣಿಗಳು ಲಭ್ಯವಿರುತ್ತವೆ. ಆದರೆ, ತಹಶೀಲ್ದಾರರು ರಿಸೀವರ್ ಅಂತ ನಮೂದಾಗಿರುವುದಿಲ್ಲ ಹಾಗೂ ಈ ಬಗ್ಗೆ ದಾಖಲೆಗಳು ಲಭ್ಯವಿರುವುದಿಲ್ಲ.

8. ಎಂ.ಎಸ್.ಲಕ್ಷ್ಮಣಶಾಸ್ತ್ರಿ ಅವರು ಒ.ಎಸ್.158/1998 ಅಂತ ದಾವೆಯನ್ನು ಶ್ರೀ ಚನ್ನರಾಯಪ್ಪ, ರಾಮಚಂದ್ರಯ್ಯ, ಪ್ರಕಾಶ್ ಮತ್ತು ಮಂಜುನಾಥ್, ಎನ್ನುವವರ ವಿರುದ್ದ ಮಾಲೀಕತ್ವದ ಘೋಷಣೆಗಾಗಿ ಮತ್ತು ಕಂದಾಯ ದಾಖಲೆಗಳ ತಿದ್ದುಪಡಿಗಾಗಿ ದಾಖಲಿಸಿದ್ದು, ಇರುತ್ತದೆ. ಆದರೆ ಈ ದಾವೆಯಲ್ಲಿ ತಹಶೀಲ್ದಾರ್, ದೊಡ್ಡಬಳ್ಳಾಪುರ ಅವರನ್ನು ಪಕ್ಷಕಾರರಾಗಿರುವುದಿಲ್ಲ. ಮುಂದೆ ಇದೇ ದಾವೆಯಲ್ಲಿ ಉಭಯಪಕ್ಷಕಾರರು ರಾಜಿ ಡಿಕ್ರಿ ಮಾಡಿಕೊಂಡಿದ್ದು, ಅದರಲ್ಲಿ ಪ್ರತಿವಾದಿಗಳು ತಮ್ಮ ಹಿತೈಷಿಗಳ ಸಲಹೆಯಂತೆ, ಸಂಪೂರ್ಣ ಜಮೀನು ವಾದಿಗೆ ಸೇರಿದ್ದಾಗಿ, ಒಪ್ಪಿಕೊಂಡು ಅದರಲ್ಲಿ ತಮ್ಮ ಯಾವುದೇ ಹಕ್ಕು ಇರುವುದಿಲ್ಲ, ಅಂತ ರಾಜಿಯಾಗಿದ್ದಾರೆ.

9. ಈ ರಾಜಿಡಿಕ್ರಿಯ ಆಧಾರದ ಮೇಲೆ 2ನೇ ಎದುರುದಾರರು ಖಾತೆ ಬದಲಾವಣೆ ಮಾಡಿದ್ದಾಗಿ ಒಪ್ಪಿಕೊಂಡಿರುತ್ತಾರೆ. ಆದರೆ, ತಹಶೀಲ್ದಾರ್, ದೊಡ್ಡಬಳ್ಳಾಪುರ, ಅವರ ಹೆಸರಿನಲ್ಲಿ ದಾಖಲೆಯಿದ್ದು, ಅವರನ್ನೇ ಈ ದಾವೆಯ ಪಕ್ಷಕಾರರನ್ನಾಗಿ ಮಾಡದೇ ರಾಜಿ ಡಿಕ್ರಿ ಹಾಜರುಪಡಿಸಿದ್ದು, ಇದರ ಬಗ್ಗೆ ಕೂಲಂಕುಷವಾಗಿ ಪರಿಶೀಲಿಸದೇ 2ನೇ ಎದುರುದಾರರು ಖಾತೆ ಬದಲಾವಣೆ ಮಾಡಿದ್ದು ಕಂಡುಬರುತ್ತದೆ. ಒಂದುವೇಳೆ ನ್ಯಾಯಾಲಯದ ರಾಜಿ ಡಿಕ್ರಿಯ ಪ್ರಕಾರ ಖಾತೆ ಬದಲಾವಣೆಯಾಗಬೇಕಾದರೆ ದಾವೆಯ ವಾದಿ–ಪ್ರತಿವಾದಿಗಳ ಮಧ್ಯೆಯೇ ಖಾತೆ ಬದಲಾವಣೆಯಾಗಬೇಕಾಗಿತ್ತು. ಆದರೆ 3ನೇ ಪಕ್ಷಕಾರರ(ತಹಶೀಲ್ದಾರ್, ದೊಡ್ಡಬಳ್ಳಾಪುರ) ಹೆಸರನ್ನು ಕಡಿಮೆ ಮಾಡಿ ವಾದಿ – ಎಂ.ಎಸ್.ಲಕ್ಷ್ಮಣಶಾಸ್ತ್ರಿ ಅವರ ಹೆಸರಿನಲ್ಲಿ ಖಾತೆ ಬದಲಾವಣೆ ಮಾಡಲಾಗಿದೆ.

10. 2ನೇ ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ ತಿಳಿಸಿರುವಂತೆ ರಂಗನಾಥಶಾಸ್ತ್ರಿ ಎಂ.ಎಸ್.ಲಕ್ಷ್ಮಣಶಾಸ್ತ್ರಿ ಅವರ ಜಿಪಿ.ಎ.ಹೋಲ್ಡರ್ ಆಗಿದ್ದು, ಅವರ ಮನವಿಯ ಮೇರೆಗೆ ಈ ರೀತಿ ಬದಲಾವಣೆಯಾಗಿದ್ದು ಕಂಡುಬರುತ್ತದೆ. ಒ.ಎಸ್.158/1998ರ ಆದೇಶದಲ್ಲಾಗಲೀ, ಅಥವಾ ತಹಶೀಲ್ದಾರ್ ರಿಸೀವರ್ ಎಂಬ ಇತರ ಯಾವುದೇ ಅಧಿಕೃತ ದಾಖಲೆಗಳು ಲಭ್ಯವಿರುವುದಿಲ್ಲ. ದಿ.22.11.2003ರಂದು ತಹಶೀಲ್ದಾರ್, ದೊಡ್ಡಬಳ್ಳಾಪುರ, ಅವರು ಈ ಮೇಲೆ ಹೇಳಿದ ಎಲ್ಲಾ ದಾಖಲೆಗಳಿಗೆ ವ್ಯತಿರಿಕ್ತವಾಗಿ **ಬಿಸುವನಹಳ್ಳಿ ಸರ್ವೆ ನಂಬರ್ 23,24 ಜಮೀನುಗಳು ಸರ್ಕಾರಿ ಜಮೀನುಗಳಾಗಿದ್ದು, ಆಶ್ರಯ ಯೋಜನೆಯಡಿಯಲ್ಲಿ ನಿವೇಶನ ಹಂಚಿಕೆಗಾಗಿ ವರ್ಗಾವಣೆ ಮಾಡಲಾಗಿದೆಯೆಂದು ಶ್ರೀ ಹರೀಶ್, ಸಂಚಾಲಕರು, ಸಾರ್ವಜನಿಕ ಸಂಪನ್ಮೂಲ ಹಿತರಕ್ಷಣಾ ಸಮಿತಿ, ಬ್ಯಾತ, ಬೆಂಗಳೂರು ಜಿಲ್ಲೆ, ಅವರಿಗೆ ಹಿಂಬರಹ ನೀಡಿರುವ** ದಾಖಲೆ ಲಭ್ಯವಿರುತ್ತದೆ. ಹೀಗಾಗಿ, 2ನೇ ಎದುರುದಾರರು ಸೂಕ್ತ ಕಾನೂನು ಸಲಹೆ ಪಡೆಯದೆ ನ್ಯಾಯಾಲಯದ ರಾಜಿ ಡಿಕ್ರಿ ಮೇಲೆ ಖಾತೆ ಬದಲಾವಣೆ ಮಾಡಿ ಕರ್ತವ್ಯಲೋಪವೆಸಗಿರುತ್ತಾರೆಂದು ಮೇಲ್ನೋಟಕ್ಕೆ ಕಂಡುಬರುತ್ತದೆ. 1ನೇ ಎದುರುದಾರರು ಸೇವೆಯಿಂದ ನಿವೃತ್ತರಾಗಿದ್ದು, ಅವರು ಈ ಪ್ರಕರಣದಲ್ಲಿ ಯಾವುದೇ ಕ್ರಮ ಜರುಗಿಸದ ಕಾರಣ ಅವರನ್ನು ಪ್ರಕರಣದಿಂದ ಕೈಬಿಡುವುದು ಸಮಂಜಸವೆಂದು ಕಂಡುಬರುತ್ತದೆ.

11. ಆದ್ದರಿಂದ, ಎದುರುದಾರರು ಸಾರ್ವಜನಿಕ/ಸರ್ಕಾರಿ ನೌಕರರಾಗಿದ್ದು, ತಮ್ಮ ಕರ್ತವ್ಯ ಪರಿಪಾಲನೆಯಲ್ಲಿ ನಿಷ್ಠೆಯನ್ನು ತೋರದೇ, ಕರ್ತವ್ಯಲೋಪವೆಸಗಿ, ದುರ್ವರ್ತನೆ ತೋರಿಸಿ, ಸಾರ್ವಜನಿಕ/ಸರ್ಕಾರಿ ನೌಕರರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡಿರುವುದು ಮೇಲ್ನೋಟಕ್ಕೆ ಕಂಡುಬಂದಿರುವುದರಿಂದ, ಕರ್ನಾಟಕ ನಾಗರೀಕ ಸೇವೆ (ನಡತೆ) ನಿಯಮ, 1966 ರ ನಿಯಮಗಳು 3(1) ರನ್ವಯ ಶಿಸ್ತು ಕ್ರಮಕ್ಕೆ ಬಾಧ್ಯರಾಗಿರುತ್ತಾರೆಂದು ಕಂಡುಬಂದಿರುತ್ತದೆ.

12. ಆದುರಿಂದ, 2ನೇ ಎದುರುದಾರರ ವಿರುದ್ಧ ಶಿಸ್ತು ನಡವಳಿಕೆ ಹೂಡಲು ಮತ್ತು ಹಾಗೆಯೇ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿರ್ಬಂಧ ಮತ್ತು ಮೇಲ್ಮನವಿ) ನಿಯಮಗಳು, 1957 ರ ನಿಯಮ 14–ಎ ರ ಅಡಿಯಲ್ಲಿ ಎದುರುದಾರರ ವಿರುದ್ಧ ಇಲಾಖಾ ವಿಚಾರಣೆ ನಡೆಸಲು ಈ ಪ್ರಾಧಿಕಾರಕ್ಕೆ ಒಪ್ಪಿಸುವಂತೆ, ಕರ್ನಾಟಕ ಲೋಕಾಯುಕ್ತ ಕಾಯ್ದೆ, ಕಲಂ 12(3) ರನ್ವಯ ಪ್ರದತ್ತವಾದ ಅಧಿಕಾರದಡಿ, ಶಿಸ್ತು ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಿದೆ.

13. ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯ್ದೆ, ಕಲಂ 12(4) ರ ಪ್ರಕಾರ, ಶಿಸ್ತು ಪ್ರಾಧಿಕಾರವು ವರದಿಯಂತೆ ಕೈಗೊಂಡ ಅಥವಾ ಕೈಗೊಳ್ಳಲು ಉದ್ದೇಶಿಸಿರುವ ಕ್ರಮವನ್ನು ಈ ವರದಿ ತಲುಪಿದ ದಿನಾಂಕದಿಂದ ಮೂರು ತಿಂಗಳೊಳಗಾಗಿ ಈ ಪ್ರಾಧಿಕಾರಕ್ಕೆ ತಿಳಿಸಲು ಹೇಳಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

S.Sd/- 27/1/17

[ ನ್ಯಾಯಮೂರ್ತಿ ಸುಭಾಷ್ ಬಿ.ಅಡಿ ]
**ಉಪಲೋಕಾಯುಕ್ತರು,**
**ಕರ್ನಾಟಕ ರಾಜ್ಯ, ಬೆಂಗಳೂರು.**